# ಜುಮುಕಿ

■ ಮೇದಿನಿ ಕೆ.ಎಸ್
ಕಲೆ: ರೂಪಶ್ರೀ ಕಲ್ಲಿಗನೂರು



‘ಜಾತ್ರೆ ಅಂದ್ರೇನೆ ಜನ. ಜನ ಜಾಸ್ತಿ, ಕ್ರೌಡು ಅನ್ನೋ ಕಾರಣ ಕೊಟ್ಟು ಯಾರಾದ್ರೂ ಜಾತ್ರೆಗೆ ಹೋಗದೇ ಇರೋಕಾಗತ್ತಾ? ಬಾ ಹೋಗಿಬರೋಣ. ಒಂದು ರೌಂಡು ಹಾಕಿಕೊಂಡು ಬಂದ್ರಾಯ್ತಪ್ಪ. ಮೊದಲೆಲ್ಲಾ ಜಾತ್ರೆ ಅಂದ್ರೆ ಎಷ್ಟು ಇಷ್ಟಪಡ್ತಿದ್ದೆ! ಈಗ ಯಾಕೆ ಇಷ್ಟೊಂದು ಉದಾಸೀನ? ಬಾರೋ ಹೋಗಿಬರೋಣ’ ಗೆಳೆಯನ ಮಾತಿಗೆ ಅಶೋಕನ ಮನಸ್ಸೇಕೋ ಸಣ್ಣಗೆ ನರಳಿತು.

ಮೊದಲಿನ ಉತ್ಸಾಹ, ವಯಸ್ಸು ಎರಡೂ ಈಗಿಲ್ಲ ತನಗೆ ಎನಿಸಿತು. ಗೆಳೆಯನ ಬಲವಂತಕ್ಕೆ ಎದ್ದು ತಯಾರಾಗಿ ಹೊರಟಿದ್ದಷ್ಟೇ.

ಎಂದಾದರೂ ಕಾಣಬಹುದೇ ಮತ್ತೆ ಅವಳು? ಜಾತ್ರೆಯಲ್ಲಿ ಸಿಕ್ಕವಳು, ಅಲ್ಲೇ ನಕ್ಕವಳು, ತುದಿಗಣ್ಣಿನಲ್ಲಿ ಸೆಳೆದು ಕಾಡಿಗೆಯ ಅಂದವನ್ನು ಮತ್ತಷ್ಟು ಹೆಚ್ಚಿಸಿದವಳು! ಎಲ್ಲಿದ್ದಾಳೋ ಏನೋ. ಜಾತ್ರೆಯೆಂದರೆ ಅವಳೇ ನೆನಪಾಗುವುದು. ಅವಳಿಗಾಗಿ ಅದೆಷ್ಟೋ ಜಾತ್ರೆ ಅಲೆದು ಕಣ್ಣಿಗೆ ಕಂಡದ್ದನ್ನೆಲ್ಲ ತಂದು ಮಡಿಲಿಗೆ ಸುರಿದ ಕಾಲ ಎಲ್ಲಿ ಕಳೆದು ಹೋಯಿತೇನೋ, ಅವಳು ಕಳೆದು ಹೋದ ಹಾಗೆ.

ಬೈಕಿನ ಹಿಂದೆ ಕೂತ ಅಶೋಕನಿಗೆ ಭರಪೂರ ನೆನಪುಗಳು. ಗಾಡಿ ಓಡಿಸುವ ದಿವಾಕರನಿಗೆ ಇವನ ಬಗ್ಗೆ ಗೊತ್ತಿಲ್ಲದುದು ಏನೂ ಇಲ್ಲ. ಅವನ ಇತ್ತೀಚಿನ ಅಗಾಧ ಮೌನವನ್ನು ಹೊಡೆದೋಡಿಸಲು ಅನೇಕ ಪ್ರಯತ್ನ ಮಾಡುತ್ತಾನೆ. ಅದರಲ್ಲಿ ಈ ಜಾತ್ರೆಯೂ ಒಂದು.

ಈ ಊರಿನ ಎಳ್ಳಮವಾಸ್ಯೆ ಜಾತ್ರೆಯೆಂದರೆ ಸುತ್ತಲಿನ ಹತ್ತು ಜಿಲ್ಲೆಗಳಿಗೂ ಪ್ರಸಿದ್ಧಿ. ಇಲ್ಲಿ ಸಿಗದ ವಸ್ತುಗಳು ಇನ್ನಾವ ಜಾತ್ರೆಯಲ್ಲೂ ಸಿಗುವುದಿಲ್ಲ. ಮೂರು ದಿನಗಳ ಕಾಲದ ಉತ್ಸವಕ್ಕೆ ಎಲ್ಲಿಂದಲೋ ಜನರು ಬರುತ್ತಾರೆ. ಇದಕ್ಕೆ ಪೌರಾಣಿಕ ಗರಿಮೆಯೂ ಇದೆ. ತಾಯಿಯ ಶಿರವನ್ನು ಕಡಿದ ಪರಶುರಾಮನ ಕೊಡಲಿಗೆ ಅಂಟಿದ ರಕ್ತ ಎಷ್ಟು ತೊಳೆದರೂ, ಎಲ್ಲಿ ತೊಳೆದರೂ ಹೋಗಲಿಲ್ಲವಂತೆ. ಕೊನೆಗೆ ಈ ತುಂಗೆಯ ನೀರಿನಲ್ಲಿ ತೊಳೆದಾಗ ರಕ್ತದ ಕಲೆ ಮಾಯವಾಯಿತಂತೆ. ಅದಕ್ಕಾಗಿ ರಾಮಕೊಂಡದಲ್ಲಿ ಎಲ್ಲರೂ ಸ್ನಾನಕ್ಕೆ ಬರುತ್ತಾರೆ. ಮಾಡಿದ ಪಾಪಗಳನ್ನು ತೊಳೆದುಕೊಂಡು ಶುದ್ಧವಾಗಲು! ‘ಹೇಗೂ ಮಾಡಿದ ಪಾಪಗಳೆಲ್ಲ ಒಂದು ಸ್ನಾನದಿಂದ ಶುದ್ಧವಾಗುತ್ತದೆ ಅಂತಾದರೆ ಎಲ್ಲರಿಗೂ ಕೆಟ್ಟ ಕೆಲಸ ಮಾಡಲು ಧೈರ್ಯ ಬರುತ್ತದೆ ಅಲ್ವಾ?’ ಜಾತ್ರೆಯಲ್ಲೊಮ್ಮೆ ಅವಳು ಕೇಳಿದ್ದು ನೆನಪಾಯಿತು ಅಶೋಕನಿಗೆ. ಸಣ್ಣಗೆ ನಗುವೂ ಬಂದಿತು.

ದೇವರ ಉತ್ಸವವನ್ನಂತೂ ನೋಡಲು ಎರಡು ಕಣ್ಣು ಸಾಲದು. ರಾತ್ರಿಯ ತೆಪ್ಪೋತ್ಸವ ವರ್ಣಿಸಲು ಪದಗಳಿಗೂ ಬಡತನ. ತುಂಗೆಯ ತೀರದ ಬಂಡೆಗಳ ಮೇಲೆ ಕೂತು ನದಿಯಲ್ಲಿನ ತೆಪ್ಪೋತ್ಸವ ನೋಡಲು ಸುತ್ತಮುತ್ತಲಿನ ಹತ್ತಾರು ಸಾವಿರ ಜನರು ಸೇರುತ್ತಾರೆ. ಎಲ್ಲೂ ಇಲ್ಲದ ವಿಶಿಷ್ಟ ಆಚರಣೆ ಇಲ್ಲಿ ನಡೆಯುತ್ತದೆ. ಮತ್ತೂ ಸಂಭ್ರಮವೆಂದರೆ ತೆಪ್ಪೋತ್ಸವದ ಆ ಸಮಯದಲ್ಲಿ ಸಿಡಿಯುವ ಪಟಾಕಿಗಳು! ಸ್ವರ್ಗದ ದೇವತೆಗಳಿಗೆ ಭೂಮಿಗೆ ಬರಲು ಬೆಳಕಿನ ವ್ಯವಸ್ಥೆ ಮಾಡಿದ ಹಾಗೆ!

ಅದನ್ನೇ ನೆನಪು ಮಾಡಿಕೊಳ್ಳುತ್ತಾ ಅಶೋಕ, ದಿವಾಕರ ಇಬ್ಬರೂ ಜಾತ್ರೆಯ ಬೀದಿಯಲ್ಲಿ ನಡೆದುಕೊಂಡು ಬಂದರು. ಸುತ್ತಲಿನ ಅಂಗಡಿಗಳು, ಅವಳು ಇಷ್ಟಪಟ್ಟು ಖರೀದಿಸುತ್ತಿದ್ದ ಜುಮುಕಿಗಳು, ಬೇಡವೆಂದರೂ ಹಟ ಮಾಡಿ ಕೊಡಿಸಿಕೊಳ್ಳುತ್ತಿದ್ದ ಕಾಟನ್ ಕ್ಯಾಂಡಿ, ಚುರುಮುರಿಗಳು ಹಾಗೆಯೇ ಇದ್ದವು. ಆಚೆಯ ಬಯಲಿನಲ್ಲಿ ಅವಳು ಇಷ್ಟಪಟ್ಟು ಕೂರುತ್ತಿದ್ದ ಜಾಯಿಂಟ್ ವೀಲ್ ಕೂಡಾ ಹಾಗೆಯೇ ಇತ್ತು. ಇಲ್ಲದಿದ್ದುದು ಅವಳು ಮಾತ್ರ. ಭಯವಾಗುತ್ತದೆಂದು ಇವನ ಕೈಯನ್ನು ಗಟ್ಟಿಯಾಗಿ ಹಿಡಿದು, ಕೆಲವೊಮ್ಮೆ ಭುಜವನ್ನು ಬಳಸಿ, ಕಣ್ಮುಚ್ಚಿ ಜಾಯಿಂಟ್ ವೀಲಿನಲ್ಲಿ ಕೂತು ಸಂಭ್ರಮಿಸಿದ ಅವಳ ನೆನಪು ಮತ್ತೊಮ್ಮೆ ಕಾಡಿತು. ಎಲ್ಲಾದರೂ ಕಾಣಬಹುದೇ ಅವಳು! ಸುತ್ತಲೂ ನೋಡಿದ. ತಣ್ಣನೆಯ ಸುಗಂಧವೊಂದು ಹಾದು ಹೋದಂತಾಯಿತು. ಭ್ರಮೆ ತನ್ನದು ಎಂದು ನಿಟ್ಟುಸಿರುಬಿಟ್ಟ.

ಬದುಕು ಹೀಗೆ ಬೇರೆ ದಾರಿಯಲ್ಲಿ ಸಾಗಿ ಹತ್ತು ವರ್ಷಗಳೇ ಕಳೆದಿವೆ. ಅವಳು ಗಮ್ಯ ತಲುಪಿಯೂ ಆಗಿದೆ. ತಾನಿನ್ನೂ ದಾರಿ ಬದಿಯಲ್ಲಿ ಹಾಗೆಯೇ ನಡೆಯುತ್ತಿದ್ದೇನೆ. ಇಷ್ಟು ದಿನ ಇಲ್ಲದ ಅವಳ ನೆನಪು ಇಂದೇಕೆ ಹೀಗೆ ಕಾಡಬೇಕು ನನ್ನನ್ನು? ವಿಷಾದವೇ ಉತ್ತರ.

ತುಂಗೆಯ ತಟಕ್ಕೆ ಬಂದು ಬಂಡೆಯನ್ನು ಆರಿಸಿ ಕೂತರು. ಇನ್ನೂ ಜನರು ಬರುತ್ತಿದ್ದರು. ತೆಪ್ಪೋತ್ಸವ ತುಸು ತಡ. ನದಿಯಲ್ಲಿ ಬಣ್ಣಬಣ್ಣದ ಲೈಟುಗಳ ಸರಮಾಲೆ, ಅಲಂಕಾರ ಮೊದಲಿಗಿಂತ ಜೋರಾಗಿತ್ತು. ಜನರೂ ಅಷ್ಟೇ. ವಿಪರೀತ. ‘ಈಗ ಜನರಿಗೆ ದುಡಿಯುವುದರ ಜೊತೆಗೆ ಖರ್ಚು ಮಾಡೋದೂ ಗೊತ್ತು, ಖುಷಿಪಡೋದೂ ಗೊತ್ತು ಕಣೋ. ಮೊದಲಿನ